**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಓ ಎಸ್ ನಂ. 1 / 2018**

| | | |
|---|---|---|
| ಸಾಕ್ಷಿಯ ಹೆಸರು | : ಮಾದಪ್ಪ | |
| ತಂದೆಯ ಹೆಸರು | : ಗುರುಮಲ್ಲಪ್ಪ | |
| ವಯಸ್ಸು | : 64 ವರ್ಷ | |
| ಉದ್ಯೋಗ | : ವಕೀಲರು | ಪಿಡಬ್ಲ್ಯೂ -2 |
| ವಾಸ ಸ್ಥಳ | : ಕೊಳ್ಳೇಗಾಲ | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 05.01.2026**

**ಮುಖ್ಯ ವಿಚಾರಣೆ - ವಾದಿ ಪರ ವಕೀಲರಿಂದ**

ನಾನು 25 ವರ್ಷಗಳಿಂದ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ. ನಿಪಿ-1ನ್ನು ನಾನೇ ಡ್ರಾಫ್ಟ್ ಮಾಡಿದ್ದೇನೆ. ನಿಪಿ-1ಕ್ಕೆ A R A Dairy Farm private Ltd. ಪರ ಡೈರೆಕ್ಟರ್ ಆಗಿ ರವಿ ಮತ್ತು ಅವರ ಹೆಂಡತಿ ಸುಜಾತರವರು ಸಹಿ ಮಾಡಿರುತ್ತಾರೆ ಮತ್ತು 1ನೇ ಪ್ರತಿವಾದಿ ನಿಪಿ-1ಕ್ಕೆ ಸಹಿ ಮಾಡಿರುತ್ತಾರೆ. ಸಾಕ್ಷಿಗಳಾಗಿ ಅಬ್ದುಲ್ ಕಲೀಲ್ ಮತ್ತು ಎಚ್. ಎನ್. ಗೀತಾರವರು ಸಹಿ ಮಾಡಿರುತ್ತಾರೆ. ಪತ್ರ ಬರಹಗಾರರಾಗಿ ನಾನು ಸಹಿ ಮಾಡಿದ್ದೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಿಪಿ-1 ಕ್ರಯದ ಕರಾರು ಪತ್ರವಾಗಿರುತ್ತದೆ. ಸದರಿ ಕ್ರಯದ ಕರಾರು ಪತ್ರ ದಿನಾಂಕಃ 16.06.2014 ರಂದು ಆಗಿರುತ್ತದೆ. ಕ್ರಯದ ಕರಾರು ರೂ. 26,95,000/- ಕ್ಕೆ ಆಗಿದೆ ಎಂದರೆ ಸರಿ. ಸಾಕ್ಷಿಯು ನನ್ನ ಮುಂದೆ ಹಣಕಾಸಿನ ವ್ಯವಹಾರ ಆಗಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ವಾದಿ ಮತ್ತು ಪ್ರತಿವಾದಿಗಳು ಸದರಿ ಹಣಕ್ಕೆ ವ್ಯವಹಾರವಾಗಿದೆ ಎಂದು ಹೇಳಿರುವ ಕಾರಣ ನಿಪಿ-1 ರಲ್ಲಿ ಆ ಬಗ್ಗೆ ನಮೂದು ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ನಿಪಿ-1ನ್ನು ಬರೆಯುವಾಗ ರೂ. 3,50,000/- ಹಣವನ್ನು ಡಿಡಿ ಮೂಲಕ ಮತ್ತು ಉಳಿದ 3,50,000/- ಹೆಚ್ ಡಿ ಎಫ್ ಸಿ ಚೆಕ್ಕಿನ ಮೂಲಕ ಕೊಟ್ಟಿರುವ ಬಗ್ಗೆ ರಶೀದಿಯನ್ನು ನನಗೆ ತೋರಿಸಿರುತ್ತಾರೆ. 1ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಕ್ರಯ ಪತ್ರವನ್ನು ಮತ್ತು ಆರ್ ಟಿ ಸಿ ಯನ್ನು ನಿಪಿ-1ನ್ನು ಬರೆಯುವ ಕಾಲಕ್ಕೆ ನೋಡಿರುತ್ತೇನೆ. ಸಾಕ್ಷಿದಾರರ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಓ

(ಸುನೀತ )

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ. ಕೊಳ್ಳೇಗಾಲ.